ಸುವರ್ಣ ಗ್ರಾಮೋದಯ ಯೋಜನೆ

1393(1711); ಶ್ರೀ ಗುರುಪಾಟೀಲ ಶಿರವಾಳ (ಶಹಾಪುರ)

ಅ) ಸುವರ್ಣ ಗ್ರಾಮೋದಯ ಯೋಜನೆ ಎಂದಿನಿಂದ ಜಾರಿಗೆ ಬಂದಿರುತ್ತದೆ; ಈ ಯೋಜನೆಯ ಮುಖ್ಯ ಉದ್ದೇಶಗಳೇನು;

ಆ) ಇದುವರೆಗೂ ಯಾದಗಿರಿ ಜಿಲ್ಲೆಯ ಎಷ್ಟು ಗ್ರಾಮಗಳಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಗಿದೆ; ಎಷ್ಟು ಗ್ರಾಮಗಳಲ್ಲಿ ಯೋಜನೆ ಪೂರ್ಣಗೊಂಡಿದೆ; (ತಾಲ್ಲೂಕುವಾರು ವಿವರ ನೀಡುವುದು);

ಇ) ಈ ಯೋಜನೆಗೆ ಮಂಜೂರಾಗಿರುವ, ಬಿಡುಗಡೆಯಾಗಿರುವ ಹಾಗೂ ಇದುವರೆವಿಗೂ ಖರ್ಚಾಗಿರುವ ಅನುದಾನ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು);

ಈ) ಯೋಜನೆಯ ಅನುಷ್ಠಾನದಲ್ಲಿ ವಿಳಂಬವಾಗುತ್ತಿದೆಯೇ; ವಿಳಂಬವಾಗಿದ್ದರೆ ಕಾರಣಗಳೇನು; (ವಿವರ ನೀಡುವುದು)?

ಶ್ರೀ ಎಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ಸುವರ್ಣ ಗ್ರಾಮೋದಯ ಯೋಜನೆಯು ದಿನಾಂಕ 25.02.2007 ರಂದು ಜಾರಿಗೆ ಬಂದಿರುತ್ತದೆ.

ಯೋಜನೆಯ ಮುಖ್ಯ ಧ್ಯೇಯೋದ್ದೇಶಗಳು:

1. ಆಯ್ಕೆಯಾದ ಗ್ರಾಮಗಳ ಜನಜೀವನ ಗುಣಮಟ್ಟವನ್ನು ಉತ್ತಮಗೊಳಿಸಲು ಭೌತಿಕ ಪರಿಸರವನ್ನು ಮೇಲ್ದರ್ಜೆಗೇರಿಸಲು ರಸ್ತೆ ಮತ್ತು ಚರಂಡಿಗಳ ಸಂಪರ್ಕವನ್ನು ಕಲ್ಪಿಸುವುದು.
2. ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಮೂಲಭೂತ ಸೌಕರ್ಯಗಳಾದ ಸಮುದಾಯಭವನ ಹಾಗೂ ಅಂಗನವಾಡಿ ಕಟ್ಟಡಗಳನ್ನು ಒದಗಿಸುವುದು.

3. ವಿಶೇಷವಾಗಿ ವಿದ್ಯಾವಂತ ನಿರುದ್ಯೋಗಿ ಯುವಜನರಿಗೆ ಕೃಷಿಯೇತರ ಉದ್ಯೋಗಾವಕಾಶಗಳಿಗೆ ತರಬೇತಿ ನೀಡುವುದು.

4. ಗ್ರಾಮದೊಳಗಿನ ವಿದ್ಯುಚ್ಛಕ್ತಿ / ಸೌರದೀಪಗಳನ್ನು ಅಳವಡಿಸಲು ಅವಕಾಶ ಕಲ್ಪಿಸುವುದು.

ಆ) **ಮತ್ತು** ಇ) ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಈ) ಯೋಜನೆಯು ಹಂತವಾರು ಕಾರ್ಯಕ್ರಮವಾಗಿರುವುದರಿಂದ ವಿವಿಧ ಹಂತಗಳಲ್ಲಿ ಅನುದಾನದ ಹಂಚಿಕೆಯಂತೆ ಪ್ರಗತಿಯನ್ನು ಸಾಧಿಸಲಾಗುತ್ತಿದೆ.

ಅನುಬಂಧ–1

ಶ್ರೀ ಗುರು ಪಾಟೀಲ ಶಿರವಾಳ (ಶಹಾಪೂರ) ವಿಧಾನ ಸಭೆ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1711 ಕ್ಕೆ ಉತ್ತರ

(ರೂ ಲಕ್ಷಗಳಲ್ಲಿ)

ಪೆಲ್ಲೆ	ಕ್ರ ಸಂ	ಪಾಲ್ಗೊಳಿಸಿದ ಪೆಸರು	ಆಯ್ಕೆಯಾದ ಗ್ರಾಮಗಳ ಸಂಖ್ಯೆ	ಮಂಜೂರು ಮಾಡಿದ ಮೊತ್ತ	ಬಿಡುಗಡೆ ಮಾಡಿದ ಮೊತ್ತ	ಪೆಚ್ಚ ಮಾಡಿದ ಮೊತ್ತ	ಯೋಜನೆ ಪೂರ್ಣಗೊಂಡ ಗ್ರಾಮಗಳ ಸಂಖ್ಯೆ	ಯೋಜನೆ ಅಪೂರ್ಣ ಗೊಂಡ ಗ್ರಾಮಗಳ ಸಂಖ್ಯೆ	ಯೋಜನೆಯು ವಿಳಂಬವಾಗುತ್ತಿದ್ದರೆ ಅದಕ್ಕೆ ಕಾರಣ
ಯಾದಗಿರಿ	01	ಶಹಾಪೂರ	54	3756.00	3222.48	3002.27	21	33	ಬಾಕಿ ಉಳಿದ ಕಾಮಗಾರಿಗಳು ಪ್ರಗತಿಯಲ್ಲಿದ್ದು ಯಾವುದೇ ವಿಳಂಬ ವಾಗಿರುವದಿಲ್ಲ
	02	ಯಾದಗಿರಿ	64	3757.00	3222.48	3002.27	32	32	
	03	ಸುರಪೂರ	96	4400.00	3222.48	3002.27	39	57	
	ಒಟ್ಟು		214	11913.00	9667.45	9006.81	92	122	